**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.</u>**

**<u>ಸಿ.ಸಿ.ಸಂ.1034/2025</u>**

ಪಿರ್ಯಾದುದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

**ವಿರುದ್ಧ**

ಆರೋಪಿಗಳು :1. ಆಕಾಶ ಎಸ್ ಬಿನ್ ಲೇ.ಸೀನಾ ಬೋವಿ,
ವಯಸ್ಸು 22 ವರ್ಷ,

2. ಬಾಲು ಉಃ ಬಾಲಕೃಷ್ಣ ಕೆ.ಎಸ್,
ಬಿನ್ ಲೇ.ಸಿದ್ದಲಿಂಗಾಬೋವಿ,
ವಯಸ್ಸು 42 ವರ್ಷ,

3. ಜಲೇಂದ್ರ ಬಿನ್ ತಿಮ್ಮಬೋವಿ,
ವಯಸ್ಸು 37 ವರ್ಷ,

4. ಕುಮಾರ ಬಿನ್ ದಾಸಬೋವಿ,
ವಯಸ್ಸು 33 ವರ್ಷ,

5. ಶಾರಾದ ಬಿನ್ ಲೇ.ಸೀನಾಬೋವಿ,
ವಯಸ್ಸು 36 ವರ್ಷ,

6. ಸುಬ್ಬಮ್ಮ ಕೋಂ ದಾಸಬೋವಿ,
ವಯಸ್ಸು 53 ವರ್ಷ,

7. ಗೀತಾ ಕೋಂ ಮಹಾದೇವ,
ವಯಸ್ಸು 43 ವರ್ಷ,

ಆ-1 ರಿಂದ 7 ರವರ ವಾಸಃ
ಮಾಕನಹಳ್ಳಿ ಪಾಳ್ಯ ಗ್ರಾಮ,
ಪಿರಿಯಾಪಟ್ಟಣ ಲ್ಲೂಕು,
ಮೈಸೂರು ಜಿಲ್ಲೆ.

## <u>ದೋಷಾರೋಪಣೆ</u>

ಶ್ರೀ ಯೋಗೇಶ.ಎಂ.ಆರ್., ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ., ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆಃ-

**ಮೊದಲನೇಯದಾಗಿ,** ದಿನಾಂಕ 29.05.2024 ರಂದು ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಪಿರಿಯಾಪಟ್ಟಣ ತಾಲ್ಲೂಕು ಮಾಕನಹಳ್ಳಿ ಪಾಳ್ಯದ ಚಾಸಾ.3 ಪುಟ್ಟಯ್ಯ ರವರ ಬಾಬ್ತು ಚಿಲ್ಲರೆ ಅಂಗಡಿ ಮಳಿಯಲ್ಲಿ, ಚಾಸಾ.1 ಚಿಕ್ಕಮ್ಮ ರವರು ವ್ಯಾಪಾರ ಮಾಡುತ್ತಿದ್ದಾಗ, 1 ರಿಂದ 7 ನೇ ಆರೋಪಿಗಳಾದ ನೀವು ಚಿಲ್ಲರೆ ಅಂಗಡಿಯ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.143 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

**ಎರಡನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಿಲ್ಲರೆ ಅಂಗಡಿ ಮಳಿಗೆಯ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.148 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಮೂರನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 3 ರಿಂದ 7 ನೇ ಆರೋಪಿಗಳಾದ ನೀವು ಚಾಸಾ.1 ಚಿಕ್ಕಮ್ಮ ರವರ ಚಿಲ್ಲರೆ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ

ಸಂಹಿತೆ ಕಲಂ.448 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ನಾಲ್ಕನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 5 ರಿಂದ 7 ನೇ ಆರೋಪಿಗಳಾದ ನೀವು ಚಾಸಾ.1 ಚಿಕ್ಕಮ್ಮ ರವರನ್ನು ಅಂಗಡಿಯಿಂದ ಹೊರಗೆ ಎಳೆದುಕೊಂಡು ಬಂದು, ಅವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಏನೇ ಮುಂಡೆ, ನಿನ್ನ ಗಂಡ ಎಲ್ಲಿ, ನಮ್ಮ ಹುಡುಗರಿಗೆ ಹೊಡೆದು ಆಸ್ಪತ್ರೆಗೆ ಸೇರಿಸುತ್ತೀರಾ ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಐದನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 5 ರಿಂದ 7 ನೇ ಆರೋಪಿಗಳಾದ ನೀವು ನಿಮ್ಮ ಕೈಗಳಿಂದ ಚಾಸಾ.1 ಚಿಕ್ಕಮ್ಮ ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಆರನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 3 ನೇ ಮತ್ತು 4 ನೇ ಆರೋಪಿಗಳಾದ ನೀವು ಅಂಗಡಿಗೆ ನುಗ್ಗಿ ಅಂಗಡಿಯಲ್ಲಿದ್ದ ಬೀಡಿ ಬಂಡಲ್ ಗಳು ಹಾಗೂ ಸಾಮಾನುಗಳನ್ನು ಚೆಲ್ಲಾಡಿದ್ದು ಹಾಗೂ 3 ನೇ ಆರೋಪಿಯಾದ ನೀವು ಸಿಸಿಟಿವಿ ಕ್ಯಾಮರಾವನ್ನು ಕೈ ನಿಂದ ಕಿತ್ತು, ನೆಲಕ್ಕೆ ಬಡಿದು

ಹೊಡೆದು ಹಾಕಿದ್ದು, ಇದರಿಂದ ಚಾಸಾ.1 ಚಿಕ್ಕಮ್ಮ ರವರಿಗೆ ಸುಮಾರು 25,000/- ಗಳಷ್ಟು ನಷ್ಟವಾಗಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಏಳನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಪೈಕಿ 3 ರಿಂದ 7 ನೇ ಆರೋಪಿಗಳಾದ ನೀವು ಚಾಸಾ.1 ಚಿಕ್ಕಮ್ಮ ರವರಿಗೆ, ನಮ್ಮ ತಂಟೆಗೆ ಬಂದರೆ ನಿನನ್ನು ನಿಮ್ಮ ಮನೆಯವರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡುವುದಾಗಿ ಪ್ರಾಣಾ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಕೊನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಪೈಕಿ, 1 ನೇ ಮತ್ತು 2 ನೇ ಆರೋಪಿಯಾದ ನೀವು 3 ನೇ ಆರೋಪಿಯಾದ ನಿಮಗೆ ಸಿಸಿಟಿವಿ ಕ್ಯಾಮರವನ್ನು ಹೊಡೆದು ಹಾಕಲು ಹಾಗೂ ಮೇಲ್ಕಂಡ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ.114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ:
ಪಿರಿಯಾಪಟ್ಟಣ.

**( ಯೋಗೇಶ.ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.